ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ)93(322)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೊಳ್ಳೇಗಾಲ ಮತಕ್ಷೇತ್ರದ ಕೊಳ್ಳೇಗಾಲದ ಶ್ರೀ ಮಹದೇಶ್ವರ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂಬಂಧ ಆಗಿಂದಾಗ್ಗೆ ಪ್ರತಿಭಟನೆಗಳು ನಡೆಯುತ್ತಿದ್ದು, ಕಳೆದ ಸಾಲಿನಲ್ಲಿ ಉಪನ್ಯಾಸಕರನ್ನು ತುಂಬಿಕೊಡಲು ಒಪ್ಪಿಗೆ ನೀಡಿರುವುದು ಸರ್ಕಾರದ ಗಮನದಲ್ಲಿದೆಯೇ?

ಇ) ಈ ಶೈಕ್ಷಣಿಕ ವರ್ಷಕ್ಕಾದರೂ ಉಪನ್ಯಾಸಕರನ್ನು ನೇಮಕ ಮಾಡಲಾಗುವುದೇ?

ಈ) ಇಲ್ಲವಾದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದೇ?

ಉ) ಕಾಲೇಜಿನಲ್ಲಿ ಯಾವ ಯಾವ ವಿಷಯಗಳಿಗೆ ಉಪನ್ಯಾಸಕರ ಕೊರತೆ ಇದೆ? (ಮಾಹಿತಿ ನೀಡುವುದು)

ಶ್ರೀ ಡಿ.ಹೆಚ್.ಶಂಕರಮೂರ್ತಿ

ಅ)ಹೌದು

ಆ)ಹೌದು

ಇ)ಇಲಾಖೆಯಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದ್ಯಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ.

ಈ)ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಕೊಳ್ಳೇಗಾಲ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಕೊರತೆ ಇರುವ ಬೋಧಕ ಹುದ್ದೆಯ ವಿವರ ಈ ಕೆಳಗಿನಂತೆ ಇದೆ. (2006–07)

ಕ್ರ.ಸಂ	ವಿಷಯ	ಒಟ್ಟು ಕಾರ್ಯ ಭಾರ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಉಳಿಕೆ ಕಾರ್ಯ ಭಾರ	ಅಗತ್ಯವಿರುವ ಉಪನ್ಯಾಸಕರ
1.	ಕನ್ನಡ	45	02	02	–	13	1
2.	ಇಂಗ್ಲಿಷ್	32	1	1	–	16	1
3.	ಇತಿಹಾಸ	43	2	2	–	11	0
4.	ಅರ್ಥಶಾಸ್ತ್ರ	43	2	1	1	27	1
5.	ರಾಜ್ಯಶಾಸ್ತ್ರ	41	1	1	–	25	1
6.	ಸಮಾಜಶಾಸ್ತ್ರ	6	0	0	–	6	–
7.	ವಾಣಿಜ್ಯಶಾಸ್ತ್ರ	12	0	0	–	12	1
8.	ಭೂಗೋಳಶಾಸ್ತ್ರ	72	3	3	–	12	0
9.	ಭೌತಶಾಸ್ತ್ರ	38	3	1	2	18	1
10.	ರಸಾಯನಶಾಸ್ತ್ರ	38	1	0	2	38	2
11.	ಗಣಿತಶಾಸ್ತ್ರ	21	1	1	–	5	–
12.	ಗಣಕವಿಜ್ಞಾನ	18	0	0	–	18	1
13.	ಸಸ್ಯಶಾಸ್ತ್ರ	16	1	1	–	–	–
14.	ಪ್ರಾಣಿಶಾಸ್ತ್ರ	16	2	0	2	16	1